# ಪತ್ರಿಕಾ ಟಿಪ್ಪಣಿ

## 2012–13ನೇ ಸಾಲಿಗೆ ವಿದ್ಯುತ್ ದರಗಳ ಪರಿಷ್ಕರಣೆ

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು 2012–13 ನೇ ಸಾಲಿಗೆ ಸಂಬಂಧಿಸಿದಂತೆ ರಾಜ್ಯದ ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳ ವಿದ್ಯುತ್ ದರಗಳನ್ನು ಪರಿಷ್ಕರಿಸಿ ಆದೇಶ ಹೊರಡಿಸಿದೆ. ಈ ಆದೇಶದಂತೆ ಪರಿಷ್ಕೃತ ದರಗಳು ಆರ್ಥಿಕ ವರ್ಷ 2012–13ಕ್ಕೆ ಅನ್ವಯವಾಗಲಿದ್ದು ದಿನಾಂಕ 30.4.2012 ರಂದು ಅಥವಾ ನಂತರ ಮೊದಲ ಬಾರಿಗೆ ಗ್ರಾಹಕರ ಮೀಟರ್ ಓದುವ ದಿನಾಂಕದಿಂದ ಬಳಸುವ ವಿದ್ಯುಚ್ಛಕ್ತಿಗೆ ಅನ್ವಯವಾಗುತ್ತವೆ.

ವಿವಿಧ ಸರಬರಾಜು ಕಂಪನಿಗಳು ಭಾಗ್ಯಜ್ಯೋತಿ/ಕುಟೀರಜ್ಯೋತಿ ಹಾಗೂ ನೀರಾವರಿ ಪಂಪ್‌ಸೆಟ್‌ಗಳ ಫಲಾನುಭವಿಗಳಿಗೆ ಹೊರತುಪಡಿಸಿ, ಎಲ್ಲಾ ವರ್ಗಗಳಿಗೆ ಸಮಾನವಾಗಿ ಕೋರಿದ್ದ ಸರಾಸರಿ ಹೆಚ್ಚಳ **73** ಪೈಸೆಗೆ ಎದುರಾಗಿ, ಆಯೋಗವು ವಿದ್ಯುತ್ ದರಗಳ ಸರಾಸರಿ ಏರಿಕೆ ಅನುಮೋದಿಸಿರುವುದು ಪ್ರತಿ ಯೂನಿಟ್‌ಗೆ **13** ಪೈಸೆಯಾಗಿದ್ದು, ವಿವಿಧ ವರ್ಗಗಳ ಬಳಕೆದಾರರಿಗೆ ಬೇರೆ ಬೇರೆ ಪ್ರಮಾಣದಲ್ಲಿ ದರಗಳನ್ನು ಪರಿಷ್ಕರಿಸಲಾಗಿದೆ. ದರ ಪರಿಷ್ಕರಣೆಯಲ್ಲಿ ಅತ್ಯಂತ ಕಡಿಮೆ ಹೆಚ್ಚಳವನ್ನು ಪ್ರತಿ ಯೂನಿಟ್‌ಗೆ **10** ಪೈಸೆಯಂತೆ ಗೃಹ ಬಳಕೆದಾರರಿಗೆ ಮಾಡಲಾಗಿದೆ.

ರಾಜ್ಯದಲ್ಲಿರುವ ಒಟ್ಟು **195** ಲಕ್ಷ ವಿದ್ಯುತ್ ಗ್ರಾಹಕರ ಪೈಕಿ, ನಗರ ಮತ್ತು ಗ್ರಾಮೀಣ ಪ್ರದೇಶದಲ್ಲಿರುವ ಗೃಹ ವಿದ್ಯುತ್ ಗ್ರಾಹಕರು ಹಾಗೂ **10** ಹೆಚ್.ಪಿ ಮೇಲ್ಪಟ್ಟು ಉಪಯೋಗಿಸುವ ರೈತರು ಸೇರಿ **141.52** ಲಕ್ಷ ಗ್ರಾಹಕರಿಗೆ ವಿದ್ಯುತ್ ದರ **10** ಪೈಸೆ ಹೆಚ್ಚಿಸಿಲಾಗಿದೆ. ಸುಮಾರು **24** ಲಕ್ಷ ಕೈಗಾರಿಕೆ ಮತ್ತು ವಾಣಿಜ್ಯ ಸ್ಥಾವರಗಳ ಗ್ರಾಹಕರಿಗೆ ದರ **20** ಪೈಸೆ ಹೆಚ್ಚಿಸಲಾಗಿದೆ.

ಆಯೋಗವು ನಗರ ಹಾಗೂ ಗ್ರಾಮಾಂತರ ಎಲ್.ಟಿ ನೀರು ಸರಬರಾಜು ಸ್ಥಾವರಗಳಿಗೆ ಪ್ರತಿ ಯೂನಿಟ್‌ಗೆ **50** ಪೈಸೆ ದರ ಕಡಿಮೆ ಮಾಡಿದೆ. ಹೆಚ್.ಟಿ ನೀರು ಸರಬರಾಜು ಸ್ಥಾವರಗಳಿಗೆ ದರದಲ್ಲಿ ಯಾವುದೇ ಹೆಚ್ಚಳ ಮಾಡಿರುವುದಿಲ್ಲ. ಸಾರ್ವಜನಿಕ ವಿಚಾರಣೆ ಸಮಯದಲ್ಲಿ ಸರ್ಕಾರದ ಗ್ರಾಮೀಣಾ ಅಭಿವೃದ್ಧಿ ಇಲಾಖೆಯು ಗ್ರಾಮೀಣ ನೀರು ಸರಬರಾಜು ಸ್ಥಾವರಗಳಿಗೆ ಸಂಬಂಧಿಸಿದ ವಿದ್ಯುತ್ ದರವನ್ನು ಕಡಿಮೆ ಮಾಡಬೇಕೆಂದು ಆಯೋಗಕ್ಕೆ ಮನವಿ ಸಲ್ಲಿಸಿತ್ತು.

ನಗರ ಪ್ರದೇಶಗಳ, ಗೃಹ ಬಳಕೆದಾರರ ವಿದ್ಯುತ್ ದರವನ್ನು ಮೊದಲ **30** ಯೂನಿಟ್‌ಗಳ ಬಳಕೆಗೆ ಪ್ರತಿ ಯೂನಿಟ್‌ಗೆ **ರೂ.2.20** ರಿಂದ **ರೂ.2.30ಕ್ಕೆ, 30** ರಿಂದ **100** ಯೂನಿಟ್‌ಗಳ

ಬಳಕೆಗೆ ಪ್ರತಿ ಯೂನಿಟ್‌ಗೆ **ರೂ.3.40** ರಿಂದ **ರೂ.3.50 ಕ್ಕೆ, 100** ರಿಂದ **200** ಯೂನಿಟ್‌ಗಳ ಬಳಕೆಗೆ ಪ್ರತಿ ಯೂನಿಟ್‌ಗೆ **ರೂ.4.50** ರಿಂದ **ರೂ.4.60** ಕ್ಕೆ ಹಾಗೂ **200** ಯೂನಿಟ್‌ಗಳ ಮೇಲ್ಪಟ್ಟ ಬಳಕೆಗೆ ಪ್ರತಿ ಯೂನಿಟ್‌ಗೆ **ರೂ. 5.50** ರಿಂದ **ರೂ.5.60**ಕ್ಕೆ ಹೆಚ್ಚಿಸಲಾಗಿದೆ.

ಗ್ರಾಮಾಂತರ ಪ್ರದೇಶಗಳ ಗೃಹ ಬಳಕೆದಾರರ ವಿದ್ಯುತ್ ದರವನ್ನು ಮೊದಲ **30** ಯೂನಿಟ್‌ಗಳ ಬಳಕೆಗೆ ಪ್ರತಿ ಯೂನಿಟ್‌ಗೆ **ರೂ.2.10** ರಿಂದ **ರೂ.2.20ಕ್ಕೆ, 30** ರಿಂದ **100** ಯೂನಿಟ್‌ಗಳ ಬಳಕೆಗೆ ಪ್ರತಿ ಯೂನಿಟ್‌ಗೆ **ರೂ.3.10** ರಿಂದ **ರೂ.3.20** ಕ್ಕೆ, **100** ರಿಂದ **200** ಯೂನಿಟ್‌ಗಳ ಬಳಕೆಗೆ ಪ್ರತಿ ಯೂನಿಟ್‌ಗೆ **ರೂ.4.20** ರಿಂದ **ರೂ.4.30** ಕ್ಕೆ ಹಾಗೂ **200** ಯೂನಿಟ್‌ಗಳ ಮೇಲ್ಪಟ್ಟ ಬಳಕೆಗೆ ಪ್ರತಿ ಯೂನಿಟ್‌ಗೆ **ರೂ. 5.00** ರಿಂದ **ರೂ.5.10**ಕ್ಕೆ ಹೆಚ್ಚಿಸಲಾಗಿದೆ.

ಹತ್ತು ಅಶ್ವ ಶಕ್ತಿಗಿಂತಲೂ ಹೆಚ್ಚಿನ ಸಾಮರ್ಥ್ಯದ ನೀರಾವರಿ ಪಂಪ್‌ಗಳಿಗೆ, ಖಾಸಗಿ ನರ್ಸರಿಗಳಿಗೆ, ಕಾಫಿ ಮತ್ತು ಟೀ ತೋಟಗಳಿಗೆ ಬಳಕೆಯಾಗುವ ವಿದ್ಯುತ್ ದರವನ್ನು **ರೂ.1.40** ರಿಂದ **ರೂ.1.50ಕ್ಕೆ** ಹೆಚ್ಚಿಸಲಾಗಿದ್ದು, **10** ಪೈಸೆಯಷ್ಟು ಮಾತ್ರ ದರ ಹೆಚ್ಚಿಸಲಾಗಿದೆ.

**❖ ವಾಣಿಜ್ಯ ಮತ್ತು ಕೈಗಾರಿಕೆಗಳಿಗೆ ಸಂಬಂಧಪಟ್ಟಂತೆ ದರ ಪರಿಷ್ಕರಣೆ**

ವಾಣಿಜ್ಯ ಮತ್ತು ಕೈಗಾರಿಕಾ ಸ್ಥಾವರಗಳಿಗೆ ಪ್ರತಿ ಯೂನಿಟ್‌ಗೆ **20** ಪೈಸೆಯಷ್ಟು ದರ ಹೆಚ್ಚಿಸಲಾಗಿದೆ.

ಎಲ್.ಟಿ. ಕೈಗಾರಿಕಾ ಸ್ಥಾವರಗಳಿಗೆ ಬೆಂಗಳೂರು ನಗರ ಪ್ರದೇಶದ ವ್ಯಾಪ್ತಿಯಲ್ಲಿ ಸದ್ಯದ **ರೂ.4.00** ರಿಂದ **ರೂ.5.00ರವರೆಗೆ ಇರುವ** ದರಗಳನ್ನು ಪ್ರತಿ ಯೂನಿಟ್‌ಗೆ ಕ್ರಮವಾಗಿ **ರೂ.4.20** ರಿಂದ **ರೂ.5.20** ಕ್ಕೆ ಹೆಚ್ಚಿಸಿದೆ. ಉಳಿದ ಪ್ರದೇಶಗಳಲ್ಲಿ ಪರಿಷ್ಕೃತ ದರಗಳು ಪ್ರತಿ ಯೂನಿಟ್‌ಗೆ **ರೂ.4.00** ರಿಂದ **ರೂ.5.00** ವರೆಗೆ ಆಗಿರುತ್ತವೆ.

ಹೈ ಟೆನ್ಷನ್ ಕೈಗಾರಿಕೆಗಳಿಗೆ ಸಂಬಂಧಿಸಿದಂತೆ ಸದ್ಯದ ವಿದ್ಯುತ್ ದರ **ರೂ.4.90** ರಿಂದ **ರೂ.5.30 ರವರೆಗೆ ಇದ್ದು, ಅದನ್ನು ರೂ.5.10** ರಿಂದ **ರೂ.5.50**ಕ್ಕೆ ಏರಿಕೆಯಾಗಿದ್ದು, **20** ಪೈಸೆಯಷ್ಟು ದರ ಹೆಚ್ಚಿಸಲಾಗಿದೆ.

ನಗರ ಪ್ರದೇಶಗಳ ಎಲ್.ಟಿ ವಾಣಿಜ್ಯ ಸ್ಥಾವರಗಳ ವಿದ್ಯುತ್ ದರಗಳನ್ನು ಮೊದಲ **50** ಯೂನಿಟ್‌ಗಳ ಬಳಕೆಗೆ ಪ್ರತಿ ಯೂನಿಟ್‌ಗೆ **ರೂ.6.00** ರಿಂದ **ರೂ.6.20** ಕ್ಕೆ ಮತ್ತು **50**

ಯೂನಿಟ್‌ಗಿಂತಲೂ ಹೆಚ್ಚಿನ ಬಳಕೆಗೆ ಪ್ರತಿ ಯೂನಿಟ್‌ಗೆ **ರೂ.7.00** ರಿಂದ **ರೂ.7.20** ಕ್ಕೆ ಹೆಚ್ಚಿಸಲಾಗಿದೆ.

ಗ್ರಾಮಾಂತರ ಪ್ರದೇಶಗಳ ಎಲ್.ಟಿ ವಾಣಿಜ್ಯ ಸ್ಥಾವರಗಳ ವಿದ್ಯುತ್ ದರಗಳನ್ನು ಮೊದಲ **50** ಯೂನಿಟ್‌ಗಳ ಬಳಕೆಗೆ ಪ್ರತಿ ಯೂನಿಟ್‌ಗೆ **ರೂ.5.50** ರಿಂದ **ರೂ.5.70** ಕ್ಕೆ ಮತ್ತು **50** ಯೂನಿಟ್‌ಗಿಂತಲೂ ಹೆಚ್ಚಿನ ಬಳಕೆಗೆ ಪ್ರತಿ ಯೂನಿಟ್‌ಗೆ **ರೂ.6.50** ರಿಂದ **ರೂ.6.70** ಕ್ಕೆ ಹೆಚ್ಚಿಸಲಾಗಿದೆ.

- **ಸರ್ಕಾರದ ಸಹಾಯಧನ**

ಸುಮಾರು 19.45 ಲಕ್ಷ ರೈತರ ನೀರಾವರಿ ಪಂಪ್ ಸೆಟ್‌ಗಳಿಗಾಗಿ ಮತ್ತು 28.16 ಲಕ್ಷದಷ್ಟಿರುವ ಭಾಗ್ಯಜ್ಯೋತಿ ಮತ್ತು ಕುಟೀರಜ್ಯೋತಿ ಫಲಾನುಭವಿಗಳಿಗೆ ನೀಡುವ ಉಚಿತ ವಿದ್ಯುತ್‌ಗಾಗಿ ರಾಜ್ಯ ಸರ್ಕಾರದಿಂದ ನೀಡಬೇಕಾದ ಸಹಾಯಧನವನ್ನು **2012–13**ನೇ ಸಾಲಿಗೆ **ರೂ.4,722** ಕೋಟಿಗೆ ಹೆಚ್ಚಿಸಲಾಗಿದೆ. **2011–12** ರಲ್ಲಿ ಇದಕ್ಕಾಗಿ ಸರ್ಕಾರ **ರೂ.4,156** ಕೋಟಿ ಸಹಾಯಧನ ನೀಡಿದೆ.

ನೀರಾವರಿ ಪಂಪುಸೆಟ್‌ಗಳ ವಿದ್ಯುತ್ ಬಳಕೆಯು ಕಳೆದ ಸಾಲಿನ **14,297** ದಶಲಕ್ಷ ಯೂನಿಟ್‌ಗಳಿಂದ ಈ ವರ್ಷದಲ್ಲಿ **14,875** ದಶಲಕ್ಷ ಯೂನಿಟ್‌ಗಳಿಗೆ ಹೆಚ್ಚಾಗಲಿದ್ದು ಸರ್ಕಾರದ ಸಹಾಯಧನವನ್ನು ಹೆಚ್ಚಿಸಲು ಮುಖ್ಯ ಕಾರಣವಾಗಿದೆ.

- **Time of the day ದರ ಅಳವಡಿಕೆ** ಕಡ್ಡಾಯ

ಆಯೋಗವು Time of the day ದರಗಳನ್ನು **500** ಕೆ.ವಿ.ಎ ಮತ್ತು ಮೇಲ್ಪಟ್ಟು ಮಂಜೂರಾತಿ ಪ್ರಮಾಣ ಹೊಂದಿರುವ **ಹೆಚ್.ಟಿ 2**(ಎ) ಹಾಗೂ **ಹೆಚ್.ಟಿ. 2**(ಬಿ) ಸ್ಥಾವರಗಳಿಗೆ ದಿನಾಂಕ 1.9.2012 ರಿಂದ ಕಡ್ಡಾಯ ಮಾಡಲು ತೀರ್ಮಾನಿಸಿದೆ. ಸದರಿ ಸ್ಥಾವರಗಳಿಗೆ ಈಗಿರುವ ಐಚ್ಛಿಕ (optional) Time of the day ದರ 31.8.2012 ರವರೆಗೆ ಮುಂದುವರಿಯಲಿದೆ. **500** ಕೆ.ವಿ.ಎ ಗಿಂತ ಕಡಿಮೆ ಮಂಜೂರಾತಿ ಪ್ರಮಾಣ ಹೊಂದಿರುವ **ಹೆಚ್.ಟಿ.2**(ಎ) ಮತ್ತು **ಹೆಚ್.ಟಿ.2**(ಬಿ), **ಮತ್ತು ಎಲ್.ಟಿ–5** ಮತ್ತು **ಹೆಚ್.ಟಿ.1** ಗ್ರಾಹಕರಿಗೆ ಈಗಿರುವ Time of the day ದರಗಳ ಪ್ರಕಾರ ಅನ್ವಯವಾಗುವ ಐಚ್ಛಿಕ (optional) ದರ ಮುಂದುವರಿಯಲಿದೆ. Time of the day ದರಕ್ಕೆ ಒಳಪಟ್ಟಿರುವ ಗ್ರಾಹಕರು ಸಂಜೆ **6** ರಿಂದ ರಾತ್ರಿ **10** ರವರೆಗೆ

ಉಪಯೋಗಿಸುವ ವಿದ್ಯುತ್‌ಗೆ  ಪ್ರತಿ ಯೂನಿಟ್‌ಗೆ ಸಾಮಾನ್ಯ ದರಕ್ಕಿಂತ ರೂ.**1** ರಂತೆ ಹೆಚ್ಚು ಪಾವತಿ ಮಾಡಬೇಕಾಗಿದೆ. ಹಾಗೆಯೇ ರಾತ್ರಿ **10** ರಿಂದ ಬೆಳಗ್ಗೆ **6** ರವರೆಗೆ ಬಳಸುವ ವಿದ್ಯುತ್‌ಗೆ ಪ್ರತಿ ಯೂನಿಟ್‌ಗೆ ರೂ.**1.25** ರಂತೆ ರಿಯಾಯಿತಿ ಸಿಗಲಿದೆ.

ಬಳಕೆಯ ಸಮಯವನ್ನುನುಸರಿಸಿ ದರ ವಿಧಿಸುವ Time of the day ಪದ್ಧತಿಯಿಂದ ಅತಿ ಹೆಚ್ಚು ವಿದ್ಯುತ್ ಬೇಡಿಕೆ ಇರುವ ಸಂಜೆ ಸಮಯದಲ್ಲಿ ವಿದ್ಯುತ್ ಬಳಕೆಯನ್ನು ಕಡಿಮೆ ಮಾಡಿ ಇತರ ಸಮಯದಲ್ಲಿ ವಿದ್ಯುತ್ ಬಳಕೆ ಪ್ರೋತ್ಸಾಹಿಸಲು ಸಾಧ್ಯವಾಗುವುದು.  ಇದರಂತೆ ಕೈಗಾರಿಕೆಗಳು ಮುಂತಾದ ಬಳಕೆದಾರರು ವಿದ್ಯುತ್ ಬಳಕೆಯಲ್ಲಿ ಸೂಕ್ತ ಬದಲಾವಣೆ ಮಾಡುವುದರಿಂದ ವಿದ್ಯುತ್ ಸರಬರಾಜು ಸಂಸ್ಥೆಗಳು ಹೆಚ್ಚು ಬೇಡಿಕೆಯ ಸಾಯಂಕಾಲದ ಸಮಯದಲ್ಲಿ ವಿದ್ಯುತ್ ಕಡಿತ ಮಾಡುವುದನ್ನು ತಪ್ಪಿಸಲು ಸಾಧ್ಯವಾಗುವುದು.  ಈ ಪದ್ಧತಿಯನ್ನು ಆಯೋಗವು 2009–10 ರಿಂದ ಐಚ್ಛಿಕವಾಗಿ ಜಾರಿಗೆ ತಂದಿದ್ದು ಈಗ ಕೆಲವು ವರ್ಗಗಳ ಬಳಕೆದಾರರಿಗೆ ಕಡ್ಡಾಯ ಮಾಡಲಾಗುವುದು.

## ❖ ಅಡ್ಡ ರಿಯಾಯಿತಿ ಅಧಿಕ ಕರ (Cross subsidy surcharge)

ವಿದ್ಯುತ್ ಸರಬರಾಜು ಕಂಪನಿಗಳನ್ನು ಹೊರತುಪಡಿಸಿ, ವಿದ್ಯುತ್ ಉತ್ಪಾದನೆ ಕಂಪನಿಗಳಿಂದ ಅಥವಾ ವಿದ್ಯುತ್ ಮಾರಾಟ ಕಂಪನಿಗಳಿಂದ ನೇರವಾಗಿ ವಿದ್ಯುತ್ ಖರೀದಿ ಮಾಡುವ ಮುಕ್ತ ಮಾರ್ಗ (Open Access) ಬಳಕೆದಾರರು ವ್ಹೀಲಿಂಗ್ ಶುಲ್ಕದ ಜೊತೆಗೆ ಅಡ್ಡ ರಿಯಾಯಿತಿ ಅಧಿಕ ಕರ (Cross subsidy surcharge) ಪಾವತಿ ಮಾಡಬೇಕಾಗುತ್ತದೆ. ಇಂತಹ ಸಂದರ್ಭದಲ್ಲಿ ಸರ್‌ಚಾರ್ಜ್‌ನ ದರವು ವೋಲ್ಟೇಜ್ ಹಂತ ಮತ್ತು ಗ್ರಾಹಕರು ಯಾವ ಪ್ರವರ್ಗದಲ್ಲಿ ಇದ್ದಾರೆ ಎಂಬುದರ ಮೇಲೆ ಅವಲಂಬಿತವಾಗಿದ್ದು ಪ್ರತಿ ಯೂನಿಟ್‌ಗೆ **11** ಪೈಸೆಯಿಂದ ರೂ.**2.05** ಯಷ್ಟು ಆಗುತ್ತದೆ.

ಈ Cross subsidy surcharge **66** ಕೆ.ವಿ ಮತ್ತು ಮೇಲ್ಪಟ್ಟ ವೋಲ್ಟೇಜ್ ಹಂತದ ಹೆಚ್.ಟಿ ಗ್ರಾಹಕರಿಗೆ ಪ್ರತಿ ಯೂನಿಟ್‌ಗೆ **43** ಪೈಸೆ ಮತ್ತು **33/11** ಕೆ.ವಿ ಯ ಗ್ರಾಹಕರಿಗೆ ದರ ಪ್ರತಿ ಯೂನಿಟ್‌ಗೆ **11** ಪೈಸೆ ಮಾಡಲಾಗಿದೆ.  ಅದರಂತೆ  ಈ Cross subsidy surcharge ನ್ನು **66** ಕೆ.ವಿ ಮತ್ತು ಮೇಲ್ಪಟ್ಟ ವೋಲ್ಟೇಜ್ ಹಂತದ ಹೆಚ್.ಟಿ ವಾಣಿಜ್ಯ ಗ್ರಾಹಕರಿಗೆ ಪ್ರತಿ ಯೂನಿಟ್‌ಗೆ ರೂ.**2.05** ಮತ್ತು **33/11** ಕೆ.ವಿ ಯ ವಾಣಿಜ್ಯ ಗ್ರಾಹಕರಿಗೆ ಪ್ರತಿ ಯೂನಿಟ್‌ಗೆ ರೂ.**1.73** ಮಾಡಲಾಗಿದೆ.

### ❖ ಇಂದನ ಹೊಂದಾಣಿಕೆ ವೆಚ್ಚ (**Fuel cost adjustment charges**).

ವಿದ್ಯುತ್ ಖರೀದಿ ವೆಚ್ಚವು ನಿಗದಿತ ವೆಚ್ಚ ಮತ್ತು ಏರಿಳಿತ ವೆಚ್ಚವನ್ನು (variable cost) ಒಳಗೊಂಡಿದೆ. ಏರಿಳಿತ ವೆಚ್ಚದ ಪ್ರಮುಖ ಕಾರಣ ಕಲ್ಲಿದ್ದಲು, ಡೀಸಲ್ ಮತ್ತು ನ್ಯಾಫ್ಥ ಮತ್ತು ಇತರೆ ವಸ್ತುಗಳ ಬೆಲೆ ಆಗಾಗ್ಗೆ ಬದಲಾಗುವುದರಿಂದ ವಿದ್ಯುತ್ ಉತ್ಪಾದಕರು ಈ ಹೆಚ್ಚಿನ ವೆಚ್ಚವನ್ನು ವಿದ್ಯುತ್ ಸರಬರಾಜು ಕಂಪನಿಗಳಿಗೆ ವರ್ಗಾಯಿಸುವುದರಿಂದ, ಸರಬರಾಜು ಕಂಪಿನಿಗಳು ಗ್ರಾಹಕರಿಂದ ಈ ವೆಚ್ಚವನ್ನು ವಸೂಲಿ ಮಾಡಬೇಕಿದೆ.

ಗೌರವಾನ್ವಿತ ವಿದ್ಯುಚ್ಛಕ್ತಿ ಮೇಲ್ಮನವಿ ನ್ಯಾಯಾಧೀಕರಣ (ATE) ಈ ವಿಷಯವಾಗಿ ಇಂಧನ ಏರಿಳಿತ ವೆಚ್ಚವನ್ನು ಗ್ರಾಹಕರಿಗೆ ವರ್ಗಾಯಿಸಲು ಒಂದು ವ್ಯವಸ್ಥೆ (formula/mechanism) ಯನ್ನು 6 ತಿಂಗಳ ಒಳಗಾಗಿ ರೂಪಿಸಲು ನಿರ್ದೇಶನ ನೀಡಿದೆ. ಇದಕ್ಕನುಗುಣವಾಗಿ ಗ್ರಾಹಕರಿಂದ ಇಂಧನ ಏರಿಳಿತ ವೆಚ್ಚವನ್ನು ವಸೂಲಿ ಮಾಡಲು ಆಯೋಗವು ಒಂದು ವ್ಯವಸ್ಥೆಯನ್ನು ರೂಪಿಸಲು ತೀರ್ಮಾನಿಸಿದೆ. ಇದರ ಸಂಬಂಧವಾಗಿ ಆಯೋಗವು ಈ ವರ್ಷದಲ್ಲಿಯೇ ಜಾರಿಗೆ ಬರುವಂತೆ ಪ್ರತ್ಯೇಕ ಆದೇಶ ಹೊರಡಿಸಲಿದೆ.

### ❖ ವಿದ್ಯುತ್ ಸರಬರಾಜು ಕಂಪನಿಗಳ ವಾರ್ಷಿಕ ವರಮಾನ ಬೇಡಿಕೆ (**Annual Revenue Requirement) -2013**

ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳು ಆರ್ಥಿಕ ವರ್ಷ 2012–13ಕ್ಕೆ ಸಂಬಂಧಿಸಿದಂತೆ ಒಟ್ಟಾಗಿ ಸೇರಿ ಭರಿಸುವ ವೆಚ್ಚ **ರೂ.23907.78** ಕೋಟಿಗೆ ಆಯೋಗವು ಅನುಮೋದನೆ ನೀಡಿದೆ. ವಿದ್ಯುತ್ ಸರಬರಾಜು ಕಂಪನಿಗಳು, ಸದರಿ ವರ್ಷದಲ್ಲಿ ಸುಮಾರು **49,300** ದಶಲಕ್ಷ ಯೂನಿಟ್ ವಿದ್ಯುಚ್ಛಕ್ತಿಯನ್ನು (ಪ್ರಸರಣಾ ಮತ್ತು ವಿತರಣಾ ನಷ್ಟ ಹೊರತುಪಡಿಸಿ) ಮಾರಾಟ ಮಾಡಲು ಉದ್ದೇಶಿಸಿವೆ. ಹಿಂದಿನ ವರ್ಷದಲ್ಲಿ ವಿದ್ಯುತ್ ಮಾರಾಟ ಸುಮಾರು **42,000** ದಶಲಕ್ಷ ಯೂನಿಟ್ ಆಗಿತ್ತು. ಹಿಂದಿನ ವರ್ಷದಲ್ಲಿ ಖರೀದಿಸಿದ್ದ **53,455** ದಶಲಕ್ಷ ಯೂನಿಟ್‌ನ ಎದುರಾಗಿ ಸುಮಾರು **61,000** ದಶಲಕ್ಷ ಯೂನಿಟ್ ವಿದ್ಯುತ್ತನ್ನು ಈ ವರ್ಷದಲ್ಲಿ ಕಂಪನಿಗಳು ಖರೀದಿಸಲು ಉದ್ದೇಶ ಹೊಂದಿವೆ.

ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳ ಪೈಕಿ, ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಯ ಪಾಲು ಪ್ರತಿಶತ **50**ಕ್ಕಿಂತ ಜಾಸ್ತಿ ಇದ್ದು, ಅದು ರೂ.**13,025.31** ಕೋಟಿ ವೆಚ್ಚದಲ್ಲಿ **25,856** ದಶಲಕ್ಷ ಯೂನಿಟ್‌ಗಳನ್ನು ಸರಬರಾಜು ಮಾಡಿದಂತಾಗುತ್ತದೆ.

ವಿದ್ಯುತ್ ಸರಬರಾಜು ಕಂಪನಿಗಳು **2012–13** ರಲ್ಲಿ ಸುಮಾರು **61,000** ದಶಲಕ್ಷ ಯೂನಿಟ್ ವಿದ್ಯುತ್‌ನ್ನು ಖರೀದಿ ಮಾಡಬೇಕಾಗಿದ್ದು, ಇದರಲ್ಲಿ **8,700** ದಶಲಕ್ಷ ಯೂನಿಟ್ ವಿದ್ಯುತ್‌ನ್ನು ಅಲ್ಪ ಕಾಲೀನ ಆಧಾರದ (short term basis) ಮೇಲೆ ಪ್ರತಿ ಯೂನಿಟ್‌ಗೆ ಸರಾಸರಿ ರೂ.**4.46** ದರದಲ್ಲಿ ಖರೀದಿಸಲು ಆಯೋಗವು ಅನುಮತಿ ನೀಡಿದೆ. ಅಲ್ಪಾವಧಿ ವಿದ್ಯುತ್ ಖರೀದಿ **2009–10** ರಲ್ಲಿ **1535** ದಶಲಕ್ಷ ಯೂನಿಟ್‌ನಿಂದ **2012–13**ರಲ್ಲಿ **8700** ದಶಲಕ್ಷ ಯೂನಿಟ್‌ಗೆ ಏರಿಕೆಯಾಗಿದ್ದರೂ ಸಹ, ಅಲ್ಪ ಕಾಲೀನ ವಿದ್ಯುತ್ ಖರೀದಿ ಸರಾಸರಿ ವೆಚ್ಚ **2009–10**ರಲ್ಲಿ ಪ್ರತಿ ಯೂನಿಟ್‌ಗೆ ರೂ.**6.35** ರಿಂದ, **2010–11** ರಲ್ಲಿ ಪ್ರತಿ ಯೂನಿಟ್‌ಗೆ ರೂ.**4.94** ಕ್ಕೆ ಮತ್ತು **2011–12** ರಲ್ಲಿ ಪ್ರತಿ ಯೂನಿಟ್‌ಗೆ ರೂ.**4.73** ಕ್ಕೆ ಇಳಿದಿದೆ.

### ❖ ರೆಗ್ಯುಲೇಟರಿ ಅಸೆಟ್ (ಕಾಯ್ದಿರಿಸಿದ ವರಮಾನ)

ಈ ಆಯೋಗದ ದರ ಪರಿಷ್ಕರಣ ಅದೇಶ ದಿನಾಂಕ **7.12.2010** ರಲ್ಲಿ, ಆರ್ಥಿಕ ವರ್ಷ 2013 ಕ್ಕೆ ಕಾಯ್ದಿರಿಸಿದ್ದ ರೆಗ್ಯುಲೇಟರಿ ಅಸೆಟ್‌ನ (ಕಾಯ್ದಿರಿಸಿದ ವರಮಾನ) ಮೊತ್ತವಾದ ರೂ.**401** ಕೋಟಿಗಳನ್ನು ಆಯೋಗವು ಈಗಿನ ದರ ಪರಿಷ್ಕರಣೆಯಲ್ಲಿ ಸಂಪೂರ್ಣವಾಗಿ ಸೇರಿಸಿದ್ದು, ಮುಂದಿನ ವರ್ಷಕ್ಕೆ ಯಾವುದೇ ಕಾಯ್ದಿರಿಸಿರುವ ರೆಗ್ಯುಲೇಟರಿ ಅಸೆಟ್ ಬಾಕಿ ಇರುವುದಿಲ್ಲ.

### ❖ ವಿತರಣಾ ವ್ಯವಸ್ಥೆಯಲ್ಲಿ ವಿದ್ಯುತ್ ನಷ್ಟ ಕಡಿಮೆ ಮಾಡುವ ಬಗ್ಗೆ

ವಿತರಣಾ ಕಂಪನಿಗಳ ಅನುಮೋದಿತ ವಿತರಣಾ ನಷ್ಟದ ವಿವರಗಳು ಆರ್ಥಿಕ ವರ್ಷ 2012ರ ಮತ್ತು 2013ರ ಉದ್ದೇಶಿತ ಮತ್ತು ಅನುಮೋದಿತ ವಿವರಗಳು ಈ ಕೆಳಗಿನಂತೆ ಇದೆ.

(ಶೇಕಡವಾರು)

| ವಿವರ | ಆರ್ಥಿಕ ವರ್ಷ 2012 | ಆರ್ಥಿಕ ವರ್ಷ 2013 | |
|---|---|---|---|
| | | ಉದ್ದೇಶಿತ | ಅನುಮೋದಿತ |
| ಬೆ.ವಿ.ಸ.ಕಂ. | 14.50 | 14.25 | 14.00 |
| ಮ.ವಿ.ಸ.ಕಂ. | 12.10 | 12.00 | 12.00 |
| ಚಾ.ವಿಸ.ಕಂ. | 15.25 | 15.00 | 15.00 |
| ಹು.ವಿ.ಸ.ಕಂ. | 19.35 | 18.00 | 18.00 |
| ಗು.ವಿ.ಸ.ಕಂ. | 21.00 | 19.50 | 19.50 |
| ಒಟ್ಟಾರೆ | **16.16** | | **15.36** |

2011–12ರ ಸಾಲಿನಲ್ಲಿ ವಿದ್ಯುತ್ ವಿತರಣಾ ನಷ್ಟ ಶೇಕಡ **16.16** ಆಗಿದ್ದು, ಇದನ್ನು 2012–13ರ ಸಾಲಿನಲ್ಲಿ **15.36** ಕ್ಕೆ ಇಳಿಸುವ ಗುರಿ ಹೊಂದಿದೆ.

### ❖ ಇತರ ಮುಖ್ಯಾಂಶಗಳು

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ, ಮಂಗಳೂರು ವಿದ್ಯುತ್ ಸರಬರಾಜು ಕಂಪನಿ, ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ, ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ಮತ್ತು ಗುಲಬರ್ಗ ವಿದ್ಯುತ್ ಸರಬರಾಜು ಕಂಪನಿಗಳು, ನಿರ್ವಹಣಾ ವೆಚ್ಚಗಳು ಮತ್ತು ವಿದ್ಯುತ್ ಖರೀದಿ ವೆಚ್ಚಗಳು ಹೆಚ್ಚಾಗಿರುವ ಕಾರಣಗಳಿಂದಾಗಿ, 2012–13ರ ಸಾಲಿನ ಪರಿಷ್ಕೃತ ವಾರ್ಷಿಕ ಕಂದಾಯ ಬೇಡಿಕೆ (ARR) ಮತ್ತು 2012–13ರ ಸಾಲಿನ ದರ ಪರಿಷ್ಕರಣೆಗಾಗಿ ಅರ್ಜಿಗಳನ್ನು ದಿನಾಂಕ 27.1.2012 ರಂದು ಸಲ್ಲಿಸಿದ್ದವು.

2013ನೇಯ ಸಾಲಿನ ಉದ್ದೇಶಿತ ವರಮಾನದ ಬೇಡಿಕೆ (ಎ.ಆರ್.ಆರ್) **(ರೂ.ಕೋಟಿಗಳಲ್ಲಿ)**

| ವಿವರಗಳು | ಬೆ.ವಿ.ಸ.ಕಂ. | ಮ.ವಿ.ಸ.ಕಂ. | ಚಾ.ವಿಸ.ಕಂ. | ಹು.ವಿ.ಸ.ಕಂ. | ಗು.ವಿ.ಸ.ಕಂ. | ಮೊತ್ತ |
|---|---|---|---|---|---|---|
| ಉದ್ದೇಶಿತ ಖರ್ಚು (ಎ.ಆರ್.ಆರ್) ಹಿಂದಿನ ವರ್ಷದ ಕೊರತೆ ಸೇರಿ | 14394.96 | 1878.06 | 2276.96 | 4592.38 | 2626.18 | 25768.54 |
| ದರ ಪರಿಷ್ಕರಣೆಯಲ್ಲಿ ಪರಿಗಣಿಸಿರುವ ಒಟ್ಟು ಕೊರತೆ | 1597.70 | 217.79 | 199.85 | 311.37 | 212.04 | 2538.75 |
| ಬಿಜೆ/ಕೆಜೆ ಮತ್ತು ಕೃಷಿ ಪಂಪ್ ಸೆಟ್ ಗಳಿಗೆ ಒಟ್ಟು ವಿದ್ಯುತ್ ಮಾರಾಟ (ದಶಲಕ್ಷ ಯೂನಿಟ್‌ಗಳಲ್ಲಿ) | 4786.02 | 939.42 | 2350.33 | 4717.64 | 3074.92 | 15868.33 |
| ಇತರೆ ವರ್ಗಗಳಿಗೆ ವಿದ್ಯುತ್ ಮಾರಾಟ (ದಶಲಕ್ಷ ಯೂನಿಟ್‌ಗಳಲ್ಲಿ) | 21726.29 | 2896.63 | 2769.89 | 4375.19 | 2882.79 | 34650.79 |
| ವಿ.ಸ.ಕಂ.ಗಳು ಪ್ರತಿ ಯೂನಿಟ್‌ಗೆ ಕೇಳಿರುವ ದರದ ಹೆಚ್ಚಳ (ಪೈಸೆಗಳಲ್ಲಿ) | 73 | 73 | 73 | 73 | 73 | 73 |
| ದರ ಪರಿಷ್ಕರಣೆಯಿಂದ ಉಂಟಾಗುವ ಹೆಚ್ಚಿನ ವರಮಾನ | 1597.70 | 217.79 | 199.85 | 311.37 | 212.04 | 2538.75 |
| ಕೇಳಿರುವ ಶೇಕಡವಾರು ಹೆಚ್ಚಳ | 12 | 12 | 9 | 7 | 8 | 11 |
| ಒಟ್ಟು ಖರ್ಚು(ಎ.ಆರ್.ಆರ್) ಆಧಾರಿತ ಒಂದು ಯೂನಿಟ್‌ನ ಸರಾಸರಿ ಬೆಲೆ (ರೂ.ಗಳಲ್ಲಿ) | 5.43 | 4.90 | 4.45 | 5.05 | 4.41 | 5.21 |

**ಆರ್ಥಿಕ ವರ್ಷ 2013ಕ್ಕೆ ಉದ್ದೇಶಿತ ಮತ್ತು ಅನುಮೋದಿತ ವಾರ್ಷಿಕ ಕಂದಾಯ ಬೇಡಿಕೆ ಈ ಕೆಳಕಂಡಂತಿದೆ.**

(ರೂ.ಕೋಟಿಗಳಲ್ಲಿ)

| **ವಿದ್ಯುತ್ ಸರಬರಾಜು ಕಂಪನಿಗಳು** | **ಆರ್ಥಿಕ ವರ್ಷ 2013ಕ್ಕೆ** | |
|---|---|---|
| | **ಉದ್ದೇಶಿತ** | **ಅನುಮೋದಿತ** |
| ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ | 14394.96 | 13025.31 |
| ಮಂಗಳೂರು ವಿದ್ಯುತ್ ಸರಬರಾಜು ಕಂಪನಿ | 1878.06 | 1828.43 |
| ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ಕಂಪನಿ | 2276.96 | 2403.91 |
| ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ | 4592.38 | 3949.99 |
| ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ | 2626.18 | 2700.14 |
| **ಒಟ್ಟು ರೂ.** | **25768.54** | **23907.78** |

## ❖ ಕ.ವಿ.ಪ್ರ.ನಿ.ನಿ ಯ ಆರ್ಥಿಕ ವರ್ಷ 2012–13ರ ಪ್ರಸರಣಾ ದರ ಪರಿಷ್ಕರಣೆ.

ಕ.ವಿ.ಪ್ರ.ನಿ.ನಿ ಯು 2013ರ ದರ ಪರಿಷ್ಕರಣೆಯಲ್ಲಿ, 2011 ಮತ್ತು 2012ರ ಕೊರತೆ ರೂ.**613.99** ಕೋಟಿ ಸೇರಿ ರೂ.**2,880.82** ಕೋಟಿ ವಾರ್ಷಿಕ ವರಮಾನ ಬೇಡಿಕೆಯನ್ನು (ARR) ಪರಿಗಣಿಸಲು ಅರ್ಜಿ ಸಲ್ಲಿಸಿತ್ತು. ಆಯೋಗವು ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿದ ನಂತರ ವಾರ್ಷಿಕ ವರಮಾನ ಬೇಡಿಕೆ ರೂ.**1918.77** ಕೋಟಿಗಳನ್ನು, ಮತ್ತು ಪ್ರಸರಣ ದರ ಪ್ರತಿ ಮೆಗಾ ವ್ಯಾಟ್ ಒಂದು ತಿಂಗಳಿಗೆ ರೂ.**1,12,224/-** ರಂತೆ ಅನುಮೋದಿಸಿದೆ. ಇದನ್ನು ವಿದ್ಯುತ್ ಸರಬರಾಜು ಕಂಪನಿಗಳು ವಿದ್ಯುತ್ ಖರೀದಿ ಮಾಡುವ ವೆಚ್ಚದಲ್ಲಿ ಸೇರಿಸಲಾಗಿದೆ ಮತ್ತು ಆಯೋಗವು ಅನುಮೋದಿಸಿರುವ ವಿದ್ಯುತ್ ಸರಬರಾಜು ಕಂಪನಿಗಳ ದರ ಪರಿಷ್ಕರಣೆಯಲ್ಲಿ ಅಡಕವಾಗಿದೆ.

## ❖ ಆದೇಶದ ಮುಖ್ಯಾಂಶಗಳು

(ಅ) ಎಲ್.ಟಿ. ನೀರು ಸರಬರಾಜು ಸ್ಥಾವರಗಳಿಗೆ ದರದಲ್ಲಿ ಪ್ರತಿ ಯೂನಿಟ್‌ಗೆ 50 ಪೈಸೆ ಕಡಿಮೆಗೊಳಿಸಲಾಗಿದೆ. ಹೆಚ್.ಟಿ. ನೀರು ಸರಬರಾಜು ಸ್ಥಾವರಗಳಿಗೆ ದರದಲ್ಲಿ ಯಾವುದೇ ಹೆಚ್ಚಳ ಮಾಡಿರುವುದಿಲ್ಲ.

(ಬಿ) ಗೃಹ ಬಳಕೆ ಸ್ಥಾವರಗಳಿಗೆ ವಿದ್ಯುತ್ ದರದಲ್ಲಿ ಪ್ರತಿ ಯೂನಿಟ್‌ಗೆ **10** ಪೈಸೆ ಹೆಚ್ಚಿಸಸಲಾಗಿದೆ.

(ಸಿ) ಮೇಲೆ ತಿಳಿಸಿದ (ಅ) ಮತ್ತು (ಬಿ), ಭಾಗ್ಯಜ್ಯೋತಿ/ಕುಟೀರಜ್ಯೋತಿ ಮತ್ತು ನೀರಾವರಿ ಪಂಪ್‌ಸೆಟ್ ಫಲಾನುಭವಿಗಳಿಗೆ ಹೊರತುಪಡಿಸಿ,. ಇನ್ನಿತರ ಎಲ್ಲಾ ವರ್ಗಗಳಿಗೆ ಪ್ರತಿ ಯೂನಿಟ್‌ಗೆ 20 ಪೈಸೆಯಂತೆ ದರ ಹೆಚ್ಚಿಸಲಾಗಿದೆ.

(ಡಿ) ಹೆಚ್.ಟಿ ಕೈಗಾರಿಕೆಗಳು ಹಾಗೂ ಹೆಚ್.ಟಿ. ವಾಣಿಜ್ಯ ಬಳಕೆದಾರರಿಗೆ **"ಗ್ರೀನ್ ಟಾರಿಫ್"** ಅನ್ನು ಅವರು ಇಚ್ಛಿಸಿದಲ್ಲಿ, ನವೀಕರಸಬಹುದಾದ ಇಂಧನ ಮೂಲಗಳಿಂದ ವಿದ್ಯುತ್ ಖರೀದಿ ಹೆಚ್ಚಿಸಲು ಹಾಗೂ ಕಾರ್ಬನ್ ಫುಟ್‌ಪ್ರಿಂಟ್ ಕಡಿಮೆಗೊಳಿಸುವ ಉದ್ದೇಶದಿಂದ, ಹಿಂದಿನ ದರ ಆದೇಶದಲ್ಲಿ ಇದ್ದಂತೆ ದರಗಳನ್ನು ಮುಂದುವರಿಸಲಾಗಿದೆ. ಬಳಕೆದಾರರು "ಗ್ರೀನ್ ಟಾರಿಫ್" ಅಳವಡಿಸಕೊಂಡಲ್ಲಿ ಪ್ರತಿ ಯೂನಿಟ್ ಬಳಕೆಗೆ ಸಾಮಾನ್ಯ ದರಕ್ಕಿಂತ ರೂ.1 ಹೆಚ್ಚು ಕೊಡಬೇಕಾಗುತ್ತದೆ.

(ಇ) **"Time of the day**" ದರಗಳು **500** ಕೆ.ವಿ.ಎ ಮತ್ತು ಮೇಲ್ಪಟ್ಟು ಮಂಜೂರಾತಿ ಪ್ರಮಾಣ ಹೊಂದಿರುವ ಹೆಚ್.ಟಿ 2(ಎ) ಹಾಗೂ ಹೆಚ್.ಟಿ. 2(ಬಿ) ಸ್ಥಾವರಗಳಿಗೆ ದಿನಾಂಕ **1.9.2012** ರಿಂದ ಕಡ್ಡಾಯ ಮಾಡಲಾಗಿದೆ.

(ಎಫ್) **ಅಡ್ಡ ರಿಯಾಯಿತಿ ಅಧಿಕ ಕರ (Cross subsidy surcharge)** ಅನ್ನು ಮುಕ್ತ ಮಾರ್ಗ (**Open Access**) ಬಳಸುವ ಗ್ರಾಹಕರಿಗೆ ಮರುಅಳವಡಿಸಲಾಗಿದೆ.

(ಜಿ) ಆಯೋಗವು **"ಇಂದನ ಹೊಂದಾಣಿಕೆ ವೆಚ್ಚ" (fuel cost adjustment charge)** ಗಳನ್ನು ಮೂರು ತಿಂಗಳಿಗೆ ಒಂದು ಸಾರಿಯಂತೆ ಲೆಕ್ಕಹಾಕಿ ಈ ವರ್ಷದಿಂದಲೇ ಅನ್ವಯವಾಗುವಂತೆ ಅಳವಡಿಸಲು ತೀರ್ಮಾನ ಮಾಡಲಾಗಿದೆ. ಈ ನಿಟ್ಟಿನಲ್ಲಿ ಪ್ರತ್ಯೇಕ ಆದೇಶ ಹೊರಡಿಸಲಾಗುವುದು.

(ಹೆಚ್) **ಹೊಸ ತಾತ್ಕಾಲಿಕ ಹೆಚ್.ಟಿ** 5 ಪ್ರವರ್ಗವನ್ನು **67** ಆಶ್ವ ಶಕ್ತಿ ಮತ್ತು ಮೇಲ್ಪಟ್ಟ ಉಪಯೋಗಿಸುವ ಸಂಪರ್ಕಿತ ಪ್ರಮಾಣದ ಸ್ಥಾವರಗಳಿಗೆ ಪ್ರಾರಂಬಿಸಲಾಗಿದೆ.

(ಐ) ಈಗ ಪ್ರತ್ಯೇಕವಾಗಿರುವ ಕ್ರಮವಾಗಿ ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿರುವ ಗೃಹ ವಿದ್ಯುತ್ ಬಳಕೆ ಪ್ರವರ್ಗ ಹೆಚ್.ಟಿ.4(ಎ) ಮತ್ತು ಹೆಚ್.ಟಿ.4(ಬಿ) ಸ್ಥಾವರಗಳನ್ನು ವಿಲೀನಗೊಳಿಸಿ ಹೆಚ್.ಟಿ (4) ಪ್ರವರ್ಗ ಎಂದು ಕರೆಯಲಾಗಿದೆ.

(ಜೆ) ತಿಂಗಳಿಗೆ ರೂ.**50**ರಂತೆ ಈಗಿರುವ ಸೌರ್ಯ ರಿಯಾಯಿತಿ ಸೌಲಭ್ಯವನ್ನು ಸೌರ ಹೀಟರ್ ಬಳಕೆ ಮಾಡುವ ಗೃಹ ಬಳಕೆ ಗ್ರಾಹಕರಿಗೆ ಮುಂದುವರಿಸಲಾಗಿದೆ. ಇದರಿಂದ ವಿದ್ಯುತ್ ಸರಬರಾಜು ಕಂಪನಿಗಳಿಗೆ ಬೆಳಗಿನ ಪೀಕ್ ಸಮಯದಲ್ಲಿ ಬಳಕೆ ಕಡಿಮೆಯಾಗಿ ಮತ್ತು ವಿದ್ಯುತ್ ಉಳಿತಾಯ ಮಾಡಲು ಅನುವಾಗುತ್ತದೆ.

(ಕೆ) ಸೌರ ವಿದ್ಯುತ್ ಉತ್ಪಾದನೆ ಉತ್ತೇಜಿಸಲು, ರಾಜ್ಯದ ಗ್ರಿಡ್‌ನ ಪರಿಮಿತಿಯಲ್ಲಿ ಸೌರ ವಿದ್ಯುತ್ ವ್ಹೀಲಿಂಗ್ ಮಾಡಲು ವ್ಹೀಲಿಂಗ್ ಶುಲ್ಕ ಇರುವುದಿಲ್ಲ.

(ಎಲ್) ಕರಾವಳಿ ಪ್ರದೇಶದಲ್ಲಿರುವ ಮೀನುಗಾರಿಕೆ ಉದ್ಯಗಳಲ್ಲಿ ಉಪಯೋಗಿಸುವ ಶೈತ್ಯಾಗಾರ (**Cold Storage)** ಸ್ಥಾವರಗಳಿಗೆ ಈಗಿರುವ **"ಸೀಸನಲ್ ಇಂಡಸ್ಟ್ರೀಸ್"** ಸೌಲಭ್ಯ ಮುಂದುವರಿಯಲಿದೆ.

ಆದೇಶಗಳ ಪೂರ್ಣ ಸಾರವನ್ನು ಆಯೋಗದ ವೆಬ್‌ಸೈಟ್ www.kerc.org ನಲ್ಲಿ ನೋಡಬಹುದಾಗಿದೆ.

*******